## ‘ಸುಧಾ’ ಜೊತೆಗಿನ ಓದುಗರ ಒಡನಾಟ

### ಪ್ರತಿ ಭೇಟಿಯೂ ಸುಂದರ

ನಾನು ಓದಿ ಅರ್ಥ ಮಾಡಿಕೊಳ್ಳಲು ಆರಂಭಿಸಿದ್ದ ಕಾಲವದು. ನನಗೆ ಸುಮಾರು 10 ವರ್ಷ. ‘ಸುಧಾ’ ಹುಟ್ಟಿದ ಕಾಲದಿಂದ ಈಗಿನವರೆಗೂ, ಆತ್ಮೀಯ ಗೆಳತಿಯನ್ನು ಭೆಟ್ಟಿಯಾಗಲು ಕಾಯುತ್ತಿರುವಂತೆ, ಸಂತಸದಿಂದ ಪತ್ರಿಕೆಯ ಬರುವನ್ನು ಎದುರು ನೋಡುತ್ತಿರುತ್ತೇನೆ. ಪತ್ರಿಕೆಯನ್ನು ನೋಡುವಾಗಲೇ ಸಂಭ್ರಮ, ಓದುವಾಗಲೂ ಸಂತಸ. ನಾನು ಕೊನೆಯ ಪುಟದಿಂದ ಮೊದಲ ಪುಟದವರೆಗೆ ತಿರುವಿಹಾಕಿ, ಪರೀಕ್ಷೆಗೆ ಓದುವ ತೆರದಿ ಓದಿ ಮುಗಿಸುತ್ತೇನೆ. ಗೆಳತಿಯ 60ರ ಸಂಭ್ರಮ ಮುದ ನೀಡಿದೆ. ಅವಳು ಹೀಗೆಯೇ ಉತ್ತಮ ಲೇಖನಗಳಿಂದ ರಂಜಿಸುತ್ತ ಬೆಳೆಯಲಿ, ನಮ್ಮನ್ನೂ ಬೆಳೆಸಲಿ.

—ವೈಜಯಂತಿಮಾಲ, ಬೆಂಗಳೂರು

### ನನಗಿದು ಪ್ರತಿಷ್ಠೆಯ ಸಂಕೇತ

1975ರಲ್ಲಿ ನನ್ನದೊಂದು ಸಂಗ್ರಹ ಲೇಖನ ‘ಸುಧಾ’ದಲ್ಲಿ ಪ್ರಕಟವಾಗಿತ್ತು. ಅಂದಿನಿಂದಲೇ ನಾನು ಲೇಖನಗಳು, ಕಥೆಗಳನ್ನು ಅನುವಾದ ಮಾಡಿ ಪ್ರಕಟಣೆಗೆ ಕಳುಹಿಸಲು ಆರಂಭಿಸಿದೆ. ಈ 48 ವರ್ಷಗಳಲ್ಲಿ ‘ಸುಧಾ’ ನನ್ನನ್ನು ಮನೆಮಾತಾಗಿಸಿದೆ ಎಂದರೆ ಅತಿಶಯೋಕ್ತಿಯಲ್ಲ. ನನ್ನ ಅನೇಕ ಅನುವಾದಿತ ಕಥೆ, ಕಾದಂಬರಿಗಳು ಪ್ರಕಟಗೊಂಡಿವೆ. ಅನುವಾದಕರಿಗೆ ‘ಸುಧಾ’ ಮೊದಲಿನಿಂದಲೂ ಪ್ರೋತ್ಸಾಹ ಕೊಡುತ್ತಾ ಬಂದಿದೆ. ‘ಸುಧಾ’ದಲ್ಲಿ ನನ್ನ ಯಾವುದೇ ಅನುವಾದ ಪ್ರಕಟಗೊಂಡರೂ, ನನಗೆ ಅದೊಂದು ಪ್ರತಿಷ್ಠೆಯ ಸಂಕೇತ. ಯಾವುದೇ ರಚನೆ ಪ್ರಕಟವಾದರೂ, ಅದು ಒಂದು ಪ್ರಶಸ್ತಿಗಿಂತ ದೊಡ್ಡದು ಎಂಬುದು ನನ್ನ ಅನುಭವ.

—ಡಿ.ಎನ್. ಶ್ರೀನಾಥ್, ಶಿವಮೊಗ್ಗ

### ಹಿರಿಯಕ್ಕನ ಸ್ಥಾನ

ಪ್ರತಿ ಗುರುವಾರ ಬೆಳಿಗ್ಗೆ 7.30ಕ್ಕೆ ಬರುವ ‘ಸುಧಾ’ ಸ್ವಲ್ಪ ತಡವಾದರೂ ಅಂದಿನ ಎಲ್ಲಾ ಕೆಲಸ ಅಯೋಮಯ. ಹಿರಿಯಕ್ಕನ ಸ್ಥಾನಕ್ಕೇರಿರುವ ‘ಸುಧಾ’, ನನ್ನ ಜೀವನದಲ್ಲಿ ಒಂದು ಭಾಗವಾಗಿಬಿಟ್ಟಿದ್ದಾಳೆ. ಇಂದಿನ 4 ಜಿಬಿ, 5ಜಿಬಿ ಸ್ಪರ್ಧಾಯುಗದಲ್ಲೂ, ಟೀವಿ ಚಾನಲ್‌ಗಳ ಅಬ್ಬರದ ಮಧ್ಯೆಯೂ ಪ್ರಸಾರ ಸಂಖ್ಯೆಯಲ್ಲೂ ಮೇಲಕ್ಕೇರಿರುವ ‘ಸುಧಾ’ ಪತ್ರಿಕೆಯ ಪ್ರತಿ ಅಂಕಣ ಓದಲೇಬೇಕೆಂಬ ಗುಣಮಟ್ಟ ಕಾಯ್ದುಕೊಂಡು ಬಂದಿರುವುದು ಹೆಮ್ಮೆಯ ಸಂಗತಿ.

—ಪಿ. ಶಂಕರಪ್ಪ, ಶಿವಮೊಗ್ಗ

### ಸಾಹಿತ್ಯಲೋಕ ವಿಸ್ತರಿಸಲಿ

‘ಸುಧಾ’ಳನ್ನು ಆರಂಭಿಕ ದಿನಗಳಿಂದಲೇ ಓದುತ್ತಾ ಬಂದವನು ನಾನು. ಮೊದಲೆಲ್ಲ ಬೇರೆಯವರಿಂದ ಪತ್ರಿಕೆ ಪಡೆದು ಓದುತ್ತಿದ್ದೆ. ಉಪಾಧ್ಯಾಯನಾದ ನಂತರ ಕೊಂಡು ಓದಲು ಆರಂಭಿಸಿದೆ. ಪ್ರತಿಕ್ರಿಯೆಗಳ ಮೂಲಕ ಬರೆಯಲು ಹಚ್ಚಿ ಪ್ರಕಟಿಸಿದ್ದೇ ‘ಸುಧಾ’. ‘ಸುಧಾ’ ಪ್ರೋತ್ಸಾಹ ರಂಗವಿಮರ್ಶೆ, ನಾಟಕ ಕ್ರಿಯೆಯಲ್ಲಿ ತೊಡಗಿಸಿದವು. ಪತ್ರಿಕೆ ಚಿರಕಾಲ ಬಾಳಿ, ಸಾಹಿತ್ಯಲೋಕ ವಿಸ್ತರಿಸಲಿ ಎಂಬುದೇ ನನ್ನ ಹಾರೈಕೆ.

—ಕೊಹಿಮ ಬಸರಕೋಡು

### ಜ್ಞಾನ ವಿಕಸನದ ದೀವಿಗೆ

ನನ್ನ ಮೆಚ್ಚಿನ ‘ಸುಧಾ’ಗೀಗ 60ರ ಹರೆಯವಂತೆ!. ಈಗ ನಾನೂ 60ಕ್ಕೆ ಕಾಲಿಟ್ಟೆ. ‘ಸುಧಾ’ದಲ್ಲಿ ಬರುತ್ತಿದ್ದ ಕಾಮಿಕ್ಸ್‌ಗಳನ್ನು ಓದುತ್ತಾ ಓದುತ್ತಾ ಪುಸ್ತಕಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡೆ. ಡಾಬೂ, ಆಜಾದ್, ಶೂಜ ಹೀಗೆ ಹಲವು ಕಥೆಗಳನ್ನು, ಧಾರಾವಾಹಿಗಳನ್ನು ಓದುತ್ತಾ ಜ್ಞಾನದ ವಿಕಸನವಾಯಿತು. ‘ಅಂತ’ ಧಾರಾವಾಹಿಯನ್ನು ಕತ್ತರಿಸಿ ಪುಸ್ತಕ ಮಾಡಿಟ್ಟುಕೊಂಡಿದ್ದೆ. ಸತ್ಯ, ಚಂದ್ರನಾಥ ಆಚಾರ್ಯರ ಚಿತ್ರಗಳು ಅತ್ಯಂತ ಆಕರ್ಷಿತವಾಗಿದ್ದವು. ಅನೇಕ ಸಾಹಿತಿಗಳ ಪರಿಚಯವಾಯಿತು. ಸಾಹಿತ್ಯದಲ್ಲಿ ಆಸಕ್ತಿ ಬೆಳೆಯಿತು.

ನನ್ನ ಓದಿನ ಬೆಳವಣಿಗೆಯಲ್ಲಿ ‘ಸುಧಾ’ ಪಾತ್ರ ಮಹತ್ವದ್ದು.

—ಎಂ. ಸದಾಶಿವ್, ತುಮಕೂರು

### ಗುರುವಾರದ ‘ಸೆಳೆತ’

‘ವಾರಪತ್ರಿಕೆಗೆ ಹೆಸರು ಸೂಚಿಸಿ’ಯಿಂದ ಹಿಡಿದು ಈವರೆಗೂ ‘ಸುಧಾ’ ಗುರುವಾರದ ಸೆಳೆತ. 2008ರಲ್ಲಿ ‘ನಿಮ್ಮ ಪುಟ’ ಅಂಕಣ ನನ್ನ ಬರವಣಿಗೆಗೆ ನಾಂದಿಯಾಯಿತು. ನನ್ನ ಛಾಯಾಚಿತ್ರಗಳು, ಬರಹಗಳು, ‘ನೀವು ಕೇಳಿದಿರಿ’, ‘ಸಮುದ್ರ ಮಥನ’, ‘ಸವಿ ನೆನಪು’, ಇತ್ಯಾದಿ ಅಂಕಣಗಳಲ್ಲಿ ಪ್ರಕಟಗೊಂಡವು. ‘ಸುಧಾ’, ‘ಪ್ರಜಾವಾಣಿ’ ಬಿಡಿ ಬರಹಗಳನ್ನು ಪುಸ್ತಕ ರೂಪದಲ್ಲಿ ತರುವ ಪ್ರಯತ್ನ ನಡೆಯುತ್ತಿದೆ. ‘ಸುಧಾ’ಗೆ ಅನಂತ ಅನಂತ ವಂದನೆಗಳು.

—ಮೃತ್ಯುಂಜಯಪ್ಪ, ಚಿತ್ರದುರ್ಗ

### ‘ಸುಧಾ’ ವಿಜೃಂಭಿಸುತ್ತಿರಲಿ

‘ಸುಧಾ’ಳಿಗೂ, ನನಗೂ ಸುಮಾರು 40 ವರ್ಷಗಳ ಗೆಳೆತನ. ನಮ್ಮ ಪಕ್ಕದ ಮನೆಯವರು ‘ಸುಧಾ’ ತರಿಸುತ್ತಿದ್ದರು. ಆಗ ನಾನು ಪ್ರಾಥಮಿಕ ಶಾಲೆ ವಿದ್ಯಾರ್ಥಿ. ನಮ್ಮ ಮನೆಯ ಆದಾಯದಲ್ಲಿ ಪತ್ರಿಕೆ ಕೊಳ್ಳುವ ಸಾಮರ್ಥ್ಯ ಇರಲಿಲ್ಲ. ಹೀಗಾಗಿ ನಾನು ಸ್ವಂತ ದುಡಿಮೆ ಆರಂಭಿಸುವವರೆಗೂ ನೆರೆಮನೆ, ಸಲೂನ್ ಮತ್ತು ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಉಚಿತವಾಗಿ ಓದುತ್ತಿದ್ದೆ. ಈಗ 25 ವರ್ಷಗಳಿಂದ ನಿರಂತರವಾಗಿ ನಮ್ಮ ಮನೆಗೆ ಬರುತ್ತಿದೆ.

ಪ್ರತಿವಾರ ಹೊಸ ಹೊಸ ವಿಷಯಗಳ ಕುರಿತ ಲೇಖನಗಳು ಮತ್ತು ಕಥೆಗಳು, ವಿಭಿನ್ನ ಅಂಕಣಗಳು ನನಗೆ ತುಂಬಾ ಇಷ್ಟ. ‘ಸುಧಾ’ ಕೈಗೆತ್ತಿಕೊಂಡ ತಕ್ಷಣ ಮೊದಲು ಐದು ನಿಮಿಷದೊಳಗೆ ಪದಬಂಧ ಬಿಡಿಸುತ್ತೇನೆ. ಆ ನಂತರ ಮುಂದಿನ ಓದು. ‘ಸುಧಾ’ ಎಂದೆಂದಿಗೂ ಹೀಗೆ ವಿಜೃಂಭಿಸುತ್ತಿರಲಿ. ನೂರು ವರ್ಷಗಳ ‘ಸುಧಾ’ ಸಂಭ್ರಮವನ್ನೂ ಕಾಣುವ ಆಸೆ.

—ಮಂಜುನಾಥ್ ಸಿ. ನೆಟ್ಕಲ್, ಬೆಂಗಳೂರು

### ಮೊಮ್ಮಗಳಿಗೂ ಗೆಳತಿ...

ನಾನು ‘ಸುಧಾ’ ಪತ್ರಿಕೆ ಓದುವುದನ್ನು ಕಂಡು ನನ್ನ ಮೊಮ್ಮಗಳು ಪ್ರೇರಿತಳಾಗಿ ‘ಸುಧಾ’ಳನ್ನು ಗೆಳತಿಯನ್ನಾಗಿ ಮಾಡಿಕೊಂಡಳು. ಕ್ರಮೇಣ ಅವಳ ಜ್ಞಾನದ ಮಟ್ಟ ಹೆಚ್ಚಾಯಿತು. ಯೋಚನಾ ಶಕ್ತಿ ಬೆಳೆಸಿಕೊಂಡು ‘ಸುಧಾ’ಗೆ ಪತ್ರ ಬರೆಯಲು ಆರಂಭಿಸಿದಳು. ಕನ್ನಡದಲ್ಲಿ ಆಸಕ್ತಿ ಬೆಳೆಸಿಕೊಂಡಳು. ‘ಸುಧಾ’ದಲ್ಲಿ ಮಕ್ಕಳಿಗಾಗಿ ಮೀಸಲಿಟ್ಟಿರುವ ಪುಟದಲ್ಲಿ ಅನೇಕ ಪುಟಾಣಿಗಳು ತಮ್ಮ ಚಿತ್ರ ಬರೆಯುವ ಪ್ರತಿಭೆ ಹೊರಹಾಕಿದ್ದಾರೆ. ‘ಸುಧಾ’ ಅಭಿಮಾನಿಗಳ ಬೇಕು ಬೇಡಗಳನ್ನು ಗಮನಿಸುತ್ತಾ ಎಲ್ಲರ ಗಮನ ಸೆಳೆಯುತ್ತಾ ಸಾಗುತ್ತಿದೆ. ಅದೇ ನಮಗೆ ಸಂತಸ, ಸಂಭ್ರಮ.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

### ಹೇಳತೀರದ ಖುಷಿ

ನನ್ನ ತಾಯಿ, ನನ್ನ ದೊಡ್ಡಮ್ಮನ ಮಗಳು ‘ಸುಧಾ’ ತರಿಸುತ್ತಿದ್ದರು. ಅವರೆಲ್ಲರ ಅಚ್ಚುಮೆಚ್ಚಿನ ಪತ್ರಿಕೆ ‘ಸುಧಾ’ ಆಗಿತ್ತು. ಒಮ್ಮೆ ನಮ್ಮ ಎದುರು ಮನೆ ಹುಡುಗಿ ಅನಸೂಯಾ ಬರೆದ ಕಥೆ ‘ಸುಧಾ’ದಲ್ಲಿ ಪ್ರಕಟವಾಗಿತ್ತು. ಆಗ ನನ್ನ ತಾಯಿ, ‘ನೀನೂ ಹೀಗೆ ಬರೆಯಬೇಕು’ ಎಂದಿದ್ದರು. ಆ ಕಾರಣವೋ ಏನೋ, ನಾನು ಕೂಡ ‘ಸುಧಾ’ದಲ್ಲಿ ಮಕ್ಕಳ ಕಥೆ, ಜೋಕ್ಸ್, ನೀವು ಕೇಳಿದಿರಿ ವಿಭಾಗಕ್ಕೆ ಬರೆದಿದ್ದೆ. ಅವು ಪ್ರಕಟಗೊಂಡಾಗ ಖುಷಿ ಹೇಳತೀರದು.

—ಬಿ.ಆರ್. ಉಷಾ, ಬೆಂಗಳೂರು